ಖರೇನ... ಗೋಲ್ಡನ್ ಡೇಸ್ ಆಫ್ ಲೈಫ್ ಅನಬೇಕು. ತಿರುಗಿ ಬರೂದುಲ್ಲ ನೋಡು. ಬಾಳು ಎಲ್ಲಿದ್ದಾನೋ ಈಗ?... ಹ್ಞಾಂ... ಸಾಲು ಮುಂದ ಹೊಂಟದ. ಮತ್ತ ಮಾಡತೇನಿ" ಎಂದು ಕಟ್ ಮಾಡಿದಳು. ಹಳೆಯ ಹುತ್ತಕ್ಕೆ ಕೈ ಇಟ್ಟಿದ್ದಳು. ಸುಖಮಯವಾದ ನೆನಪಿನ ಗಂಟನ್ನು ಬಿಚ್ಚಿ ಎಸೆದಾಗ ನೆನಪುಗಳು ಒಂದೊಂದಾಗಿ ಬಲೂನುಗಳಂತೆ ಉಬ್ಬಿ ಹೊರಗೆ ಬರತೊಡಗಿದವು. ಬೇಡವೆಂದರೂ ಕೇಳದೇ...

ಸುಮಾರು ಮೂವತ್ತೈದು ವರ್ಷಗಳ ಹಿಂದಿನ ಮಾತು. ಬೆಳಗಾವಿಯಲ್ಲಿ ನಮ್ಮ ಕಾಲೇಜು ದಿನಗಳು ಆರಂಭವಾಗಿದ್ದವು. ಓದಿನ ಜೊತೆಯಲ್ಲಿ ಮೋಜು, ಮೇಜವಾನಿಗಳೂ ಜೊತೆಯಾಗುತ್ತಿದ್ದವು. ಹಾಗೆಂದು ನಾವೇನು ಸಿಕ್ಕಾಪಟ್ಟೆ ಮಜಾ ಮಾಡುವವರಲ್ಲ ಬಿಡಿ. ಅಪ್ಪ ತಿಂಗಳಿಗೆ ಹತ್ತು ರೂಪಾಯಿ ಪಾಕೆಟ್ ಮನಿ ಕೊಡುತ್ತಿದ್ದರು. ಅದರಲ್ಲಿ ತಿಂಗಳ ಕೊನೆಗೆ ಮಿಗುತ್ತಿತ್ತು ಎಂದರೆ ಯೋಚಿಸಿ. ಆಗ ಹತ್ತು ರೂಪಾಯಿಗೂ ಬೆಲೆ ಇತ್ತು. ಮನೆಯ ಹತ್ತಿರದ ಸ್ನೇಹಿತೆಯರೆಲ್ಲ ಒಂದಾಗುತ್ತಿದ್ದೆವು. ಎಲ್ಲರ ಕಾಲೇಜುಗಳೂ ಬೇರೆ ಬೇರೆ. ಓದುತ್ತಿದ್ದ ಶಾಖೆಗಳೂ ಬೇರೆಯೇ. ಇವಾವೂ ನಮಗೆ ಅಡ್ಡಿಯಾಗುತ್ತಿರಲಿಲ್ಲ. ನಾನು ಸೈನ್ಸ್, ಪ್ರತಿಭಾ ಕಾಮರ್ಸ್, ನಿವೇದಿತಾ, ತುಂಗಾ, ಜ್ಯೋತಿ ಆರ್ಟ್ಸ್ ಇದ್ದರೂ ಎಲ್ಲ ಗುರುವಾರ ಸಂಜೆ ತಪ್ಪದೇ ಸೇರಿಕೊಳ್ಳುತ್ತಿದ್ದೆವು. ಆಗ ಮೊಬೈಲ್‌ಗಳ ಕಲ್ಪನೆಯೇ ಇರಲಿಲ್ಲ. ಲ್ಯಾಂಡ್‌ಫೋನೇ ನಮ್ಮ ಮನೆಗಳಿಗಿನ್ನೂ ಬಂದಿರಲಿಲ್ಲ. ಹೀಗಾಗಿ ಸ್ನೇಹಿತೆಯರ ಮನೆಗೆ ಹೋಗಿ ಕರೆದೊಯ್ಯುವುದೇ ವಾಡಿಕೆ. ಹಾಗೆ ಎಲ್ಲರ ಕಾಲೇಜಿನ ಸಮಾಚಾರಗಳನ್ನು ಮಾತನಾಡುತ್ತ ನಮ್ಮ ಗುಂಪು ಅನಗೋಳದಿಂದ ಟಿಳಕವಾಡಿಯ ಎರಡನೇ ಗೇಟ್ ಮಾರ್ಗವಾಗಿ ವ್ಯಾಕ್ಸೆಂಡಿಪೋ ರಾಯರ ಮಠಕ್ಕೆ ಸಾಗುತ್ತಿತ್ತು. ಯಾವ ಹುಡುಗಿ ಬೋಲ್ಡಾಗಿ ಡ್ರೆಸ್ ಮಾಡುತ್ತಾಳೆ? ಸ್ಟೂಡಿಯಸ್ ಯಾರು? ಪುಸ್ತಕದ ಹುಳು ಯಾರು? ಹುಡುಗರಲ್ಲಿ ಜಾಣರು ಯಾರು? ಚೆನ್ನಾಗಿ ಡ್ರೆಸ್ ಮಾಡುವವರಾರು? ಲೈನ್ ಹೊಡೆಯುವವರಾರು? ಯಾರ್‍ಯಾರ ಅಫೇರ್‌ಗಳು ನಡೀತಾ ಇವೆ? ಪ್ರೇಮ ಪ್ರಸಂಗಗಳು... ಪ್ರಾಧ್ಯಾಪಕರ ಕಲಿಸುವಿಕೆಯ ಶೈಲಿ... ಇತ್ಯಾದಿಗಳು ವಿವರವಾಗಿ ಚರ್ಚಿತವಾಗುತ್ತಿದ್ದವು. ಆಗ ಕೋ ಎಜುಕೇಷನ್ ಇದ್ದರೂ ಹುಡುಗರು, ಹುಡುಗಿಯರು ಪಿ.ಯು. ಕ್ಲಾಸ್‌ಗಳಲ್ಲಿ ಪರಸ್ಪರ ಮಾತನಾಡುತ್ತಿದ್ದುದು ಕಡಿಮೆ. ಪದವಿ ತರಗತಿಗಳಲ್ಲಿ ಮಾತುಕತೆ ಸಲೀಸಾಗಿ ಸಾಗುತ್ತಿತ್ತು. ಗುರುವಾರ ಮೂರೂ ಕಾಲೇಜುಗಳ ಸಮಾಚಾರ ನಮಗೆ ಚೆನ್ನಾಗಿ ತಿಳಿಯುತ್ತಿತ್ತು. ದಾರಿ ಸಾಗಿದ್ದು ಮಾತ್ರ ಗೊತ್ತಾಗುತ್ತಿರಲಿಲ್ಲ. ರಾಯರ ಮಠ ಮುಟ್ಟಿ, ನಮಸ್ಕರಿಸಿ, ಐದು ಪ್ರದಕ್ಷಿಣೆ ಹಾಕಿ, ಅವರವರಿಗಿಷ್ಟವಾದ 'ಹೀರೋಗಳ ಥರಾ ಗಂಡನ್ನ ಕೊಡ್ರಿ' ಎಂದು ಬೇಡಿಕೊಂಡು, ತೀರ್ಥ ತೆಗೆದುಕೊಂಡು ಹೊರಟರೆ ಅರ್ಧ ಕೆಲಸವಾದಂತೆ. ಅಲ್ಲಿ ಪ್ರಸಾದದ ವ್ಯವಸ್ಥೆ ಇರಲಿಲ್ಲ. ಅಲ್ಲಷ್ಟೇ ಅಲ್ಲ... ಉತ್ತರ ಕರ್ನಾಟಕದ ದೇವಸ್ಥಾನಗಳಲ್ಲಿ ಹೆಚ್ಚಾಗಿ ಪ್ರಸಾದದ ವ್ಯವಸ್ಥೆ ಇರುವುದಿಲ್ಲ. ಏನಾದರೂ ವಿಶೇಷವಿದ್ದರೆ ಮಾತ್ರ ಪ್ರಸಾದ. ಅದೂ ಹೆಚ್ಚಾಗಿ ಸಕ್ಕರೆ, ಕೊಬ್ಬರಿ ಸಕ್ಕರೆ ಅಥವಾ ಪುಠಾಣಿ ಸಕ್ಕರೆಯ ಪುಡಿ ಅಷ್ಟೇ. ಬೆಂಗಳೂರಿಗೆ ಬಂದ ಮೇಲೆ ದೇವಸ್ಥಾನಗಳಲ್ಲೆಲ್ಲ ದೊನ್ನೆಯಲ್ಲಿ ಪ್ರಸಾದ ನೋಡಿದ್ದು.

ಮುಂದೆ ನಮ್ಮ ಗುಂಪು ಅವರವರ ಓಪನ್ ಸಿಕ್ರೇಟ್‌ಗಳ ಬಗ್ಗೆ ಮಾತನಾಡುತ್ತಾ ಫಸ್ಟ್ ಗೇಟ್ ತಲುಪುತ್ತಿತ್ತು. ಅಲ್ಲಿ ಗೇಟಿನಿಂದ ತುಸು ದೂರದಲ್ಲಿ ರೈಲು ಹಳಿಗಳಿಗೆ ಸಮಾನಾಂತರವಾಗಿ ಸಾಯಿಬಾಬಾನ ದೇವಸ್ಥಾನವಿತ್ತು. ಆದರೆ, ನಮ್ಮ ಗುರಿ ಅಲ್ಲಿಗೆ ಹೋಗುವುದಾಗಿರುತ್ತಿರಲಿಲ್ಲ. ಹೋಗಬಾರದೆಂದಲ್ಲ... ಒಮ್ಮೊಮ್ಮೆ ಹೋಗುತ್ತಿದ್ದೆವು. ಅಲ್ಲಿ ಕೊಡುತ್ತಿದ್ದ ಕುಸುರೆಳ್ಳಿನ ಪ್ರಸಾದ ಮತ್ತು ತೀರ್ಥವನ್ನು ಸೇವಿಸಿ ಹೊರಬರುತ್ತಿದ್ದೆವು. "ಇಲ್ಲೀತನಕಾ ಬಂದು ಗುಡಿಗೆ ಬರದಿದ್ದರ ಸಾಯಿಬಾಬಾಗ ಸಿಟ್ಟು ಬಂದೀತು..." ಎನ್ನುತ್ತಿದ್ದ ನಿವೇದಿತಾಳ ಮಾತಿಗೆ ಬೆಲೆ ಕೊಟ್ಟು ದರ್ಶನ ಮಾಡುವುದಿತ್ತು.